ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ
ದೂರವಾಣಿ:08265-221266 ಇ-ಮೇಲ್:-dcfkoppa@gmail.com

ಸಂಖ್ಯೆ: ಡಿಎಫ್‌ಟಿ.:ಎಫ್‌ಸಿಎ:ಸಿಆರ್:57/2009-10 ದಿನಾಂಕ: 25-06-2020

ಇವರಿಗೆ,
ಕಾರ್ಯಪಾಲಕ ಇಂಜಿನಿಯರ್,
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ,
ಭದ್ರಾ ಮೇಲ್ದಂಡೆ ಯೋಜನೆ,
ವಿಭಾಗ ನಂ-2, ಬಿ.ಆರ್ ಪ್ರಾಜೆಕ್ಟ್

ಮಾನ್ಯರೇ,

ವಿಷಯ:- Re-Diversion and change in land use in Sy.No 83 of K.Kanabur-0.6062ha, Sy.No 82 of K.Kanabur-0.2713ha and Sy.No 73 of Muthinakoppa - 1.0786ha. total extent 1.9561 ha. of Forest land in N.R.Pura Range of Koppa Divison for 220KV Transimission line work of Upper Bhadra Project Package-I, from diverted Forest land of Upper Tunga Project in favour of Visvesvarayya Jala Nigama Limited, B.R. Project, Bhadravathi, Shimoga District.

ಉಲ್ಲೇಖ:-1. ನಿಮ್ಮ ಕಛೇರಿ ಪತ್ರ ಸಂಖ್ಯೆ:ಕಾಇಂ:ವಿಜನಿನಿ:ಭಮೇಯೋ:ವಿ-2:ಬಿಆರ್‌ಪಿ:ಪಿಬಿ:02/2019-20 ದಿ:09-01-2020.
2. Forest Proposal No. FP/KA/TRANS/42309/2019.
3. e-mail alert from system Administrator of OSMFCP portal date: 02-01-2020
4. ವಲಯ ಅರಣ್ಯಾಧಿಕಾರಿ, ನ.ರಾ.ಪುರ ವಲಯ, ನ.ರಾ.ಪುರ ಇವರ ಕಛೇರಿ ಪತ್ರ ಸಂಖ್ಯೆ: 106/2019-20 ದಿನಾಂಕ: 01-06-2020.
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ ಇವರ ಕಛೇರಿ ಪತ್ರ ಸಂಖ್ಯೆ:219/2020-21 ದಿನಾಂಕ: 16-06-2020.
6. Govt. of India, Ministry of Environment and Forests, FC Divison ಇವರ ಪತ್ರ ಸಂಖ್ಯೆ: F.NO. 8-30/97-FC ದಿನಾಂಕ: 14-12-2004.

***

ವಿಷಯಕ್ಕೆ ಸಂಬಂಧಿಸಿದಂತೆ, ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-1ರ ಕಾಮಗಾರಿಯ ಭಾಗವಾದ ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿಯನ್ನು ಕೈಗೊಳ್ಳಲು ನ.ರಾ.ಪುರ ತಾಲ್ಲೂಕಿನ ಕೆ.ಕಣಬೂರು ಮತ್ತು ಮುತ್ತಿನಕೊಪ್ಪ ಗ್ರಾಮಗಳಲ್ಲಿ ಈ ಹಿಂದೆ ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ತುಂಗಾ ಮೇಲ್ದಂಡೆ ಯೋಜನೆಗೆ ಈ ವಿಭಾಗದ ವ್ಯಾಪ್ತಿಯಲ್ಲಿ 55.48 ಹೆಕ್ಟೇರ್ ಬಿಡುಗಡೆಯಾಗಿರುವ ಅರಣ್ಯ ಪ್ರದೇಶದ ಪೈಕಿ ಕೆ.ಕಣಬೂರು ಗ್ರಾಮದ ಸ.ನಂ 83 ರಲ್ಲಿ 0.6062 ಹೆಕ್ಟೇರ್, ಕೆ.ಕಣಬೂರು ಗ್ರಾಮದ ಸ.ನಂ 82 ರಲ್ಲಿ 0.2713 ಹೆಕ್ಟೇರ್ ಮತ್ತು ಮುತ್ತಿನಕೊಪ್ಪ ಗ್ರಾಮದ ಸ.ನಂ 73 ರಲ್ಲಿ 1.0786 ಹೆಕ್ಟೇರ್ ಒಟ್ಟು 1.9561 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 220 ಕಿ.ವ್ಯಾ ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿಯನ್ನು ಕೈಗೊಳ್ಳಲು ರೀ-ಡೈವರ್ಷನ್‌ಗಾಗಿ ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ವಲಯ ಅರಣ್ಯಾಧಿಕಾರಿ, ನ.ರಾ.ಪುರ ವಲಯ, ನ.ರಾ.ಪುರ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ ಇವರು ಉಲ್ಲೇಖ (4) ಮತ್ತು (5)ರ ಪತ್ರದಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

. . .2

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ Govt. of India, Ministry of Environment and Forests, FC Divison ಇವರ ಪತ್ರ ಸಂಖ್ಯೆ: F.NO. 8-30/97-FC ದಿನಾಂಕ: 14-12-2004 ರಲ್ಲಿ ತುಂಗಾ ಮೇಲ್ದಂಡೆ ಯೋಜನೆಗೆ 449.55 ಹೆಕ್ಟೇರ್ ಅರಣ್ಯ ಪ್ರದೇಶ ಬಿಡುಗಡೆಗೆ ಉಲ್ಲೇಖ (6)ರಲ್ಲಿ ಅನುಮೋದನೆ ನೀಡುವ ಸಂದರ್ಭದಲ್ಲಿ 16 ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಷರತ್ತುಗಳಲ್ಲಿ 11ನೇ ಷರತ್ತು ಈ ಕೆಳಕಂಡಂತಿರುತ್ತದೆ (ಪ್ರತಿ ಲಗತ್ತಿಸಿದೆ).

11. Reservoir so created shall be delcared as "Reserve Forest" under Indian Forest Act-1927 and regulated fishing rights shall be allowed

ತುಂಗಾ ಮೇಲ್ದಂಡೆ ಯೋಜನೆಗೆ 449.55 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡುವ ಮುನ್ನಾ ಕೆ.ಕಣಬೂರು ಗ್ರಾಮದ ಸ.ನಂ 97, 98, 99, 100 ಮತ್ತು 101 ರ ಖಾಸಗೀ ಜಮೀನುಗಳನ್ನು ತುಂಗಾ ಮೇಲ್ದಂಡೆ ಯೋಜನೆಗಾಗಿ ವಶಕ್ಕೆ ಪಡೆದಿದ್ದು, ಪ್ರಸ್ತುತ ಸದರಿ ಪ್ರದೇಶಗಳು ಅರಣ್ಯ ಪ್ರದೇಶವಾಗಿರುತ್ತದೆ. ಸದರಿ ಪ್ರದೇಶಗಳನ್ನು ಮೀಸಲು ಅರಣ್ಯವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಕಂದಾಯ ಇಲಾಖಾ ಪಹಣಿಯಲ್ಲಿ ಮೇಲ್ಕಂಡ ಸರ್ವೆನಂಬರ್‌ಗಳು " **ಸಂರಕ್ಷಿತ ಅರಣ್ಯ**"ವೆಂದು ನಮೂದಿಸಲ್ಪಟ್ಟಿವೆ.

ಮುಂದುವರಿದು, 220 ಕಿ.ವ್ಯಾ ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿಯನ್ನು ಕೈಗೊಳ್ಳಲು ರೀ-ಡೈವರ್ಷನ್‌ಗಾಗಿ ನೀವು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನಕಾಶೆಯನ್ನು ಪರಿಶೀಲಿಸಿದಾಗ ಕೆ.ಕಣಬೂರು ಗ್ರಾಮದ ಸ.ನಂ 83ರಲ್ಲಿ 0.6062 ಹೆಕ್ಟೇರ್, ಕೆ.ಕಣಬೂರು ಗ್ರಾಮದ ಸ.ನಂ 82 ರಲ್ಲಿ 0.2713 ಹೆಕ್ಟೇರ್ ಅರಣ್ಯ ಪ್ರದೇಶ ಬಿಡುಗಡೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಲ್ಲಿ ಕೆ.ಕಣಬೂರು ಗ್ರಾಮದ ಸ.ನಂ 97, 98, 99, 100 ಮತ್ತು 101ರ ಪ್ರದೇಶಗಳನ್ನು ಅರಣ್ಯೇತರ ಪ್ರದೇಶಗಳೆಂದು ನಕಾಶೆಯಲ್ಲಿ ಗುರುತಿಸಿರುತ್ತೀರಿ. Govt. of India, Ministry of Environment and Forests, FC Divison ಇವರ ಪತ್ರ ಸಂಖ್ಯೆ: F.NO. 8-30/97-FC ದಿನಾಂಕ: 14-12-2004 ರ ಷರತ್ತು ಸಂಖ್ಯೆ 11 ರಲ್ಲಿ ಸೂಚಿಸಿರುವಂತೆ ಕೆ.ಕಣಬೂರು ಗ್ರಾಮದ ಸ.ನಂ 97, 98, 99, 100 ಮತ್ತು 101ರ ಪ್ರದೇಶಗಳು ಅರಣ್ಯ ಪ್ರದೇಶಗಳಾಗಿರುವುದರಿಂದ ಸದರಿ ಪ್ರದೇಶಗಳನ್ನು ಸೇರಿಸಿಕೊಂಡು ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ತಿಳಿಯಪಡಿಸುತ್ತಾ, ನೀವು ಸಲ್ಲಿಸಿರುವ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.

ನಿಮ್ಮ ವಿಶ್ವಾಸಿ,

**ಉಪ ಅರಣ್ಯ ಸಂರಕ್ಷಣಾಧಿಕಾರಿ,**
ಕೊಪ್ಪ ವಿಭಾಗ, ಕೊಪ್ಪ